ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-5 Issue 3, November-December, 2023, Pp. 113-116.**
**©*IIMRD*, Mysuru**

IIMRD JOURNALS

**www.iimrd.com**

# ಡಾ. ವಿ. ಮುನಿವೆಂಕಟಪ್ಪನವರ ಜೀವನ ಸಾಧನೆ

**ಡಾ. ಪ್ರಕಾಶ ಹಣಮಂತ ಸಂಗಮ***

*ಅತಿಥಿ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

**ಸಾರಾಂಶ: (Abstract)**

*ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ 1970ರ ನಂತರ ರಚನೆಯಾದ ಸಾಹಿತ್ಯ ಸಾಮಾಜಿಕ ಚಳುವಳಿಗಳ ಜೊತೆಗೆ ಕಾಣಿಸಿಕೊಂಡ ದಲಿತ–ಬಂಡಾಯ ಸಾಹಿತ್ಯವು ಅಂಬೇಡ್ಕರವಾದ, ಮಾರ್ಕ್ಸ್‌ವಾದ, ಲೋಹಿಯಾವಾದ, ಹಾಗೂ ಬುದ್ಧ, ಬಸವ, ಅಂಬೇಡ್ಕರ್ ಅವರ ವಿಚಾರಧಾರೆಗಳು ತತ್ವ ಸಿದ್ಧಾಂತಗಳಿಂದ ಪ್ರೇರಣೆಯಾಗಿ ಆ ಮೂಲಕ ಸಮಾಜದಲ್ಲಿನ ಅನ್ಯಾಯ, ಅಸಮಾನತೆ, ಶೋಷಣೆಯ ವಿರುದ್ಧ ಧ್ವನಿಯೆತ್ತಿ ನಿಮ್ನವರ್ಗದ ಹಾಗೂ ಸಾಮಾಜಿಕವಾಗಿ ಹಿಂದುಳಿದ ಎಲ್ಲಾ ವರ್ಗದ ಶೋಷಿತರ ಪರವಾಗಿ ಅನೇಕ ಮಹನೀಯರು ಹೋರಾಟ ನಡೆಸಿದ್ದರು ಅಂತವರಲ್ಲಿ ಡಾ.ವಿ.ಮುನಿವೆಂಕಟಪ್ಪ ರವರು ಕೂಡ ಪ್ರಮುಖರಾಗಿದ್ದಾರೆ.*

**ಮುಖ್ಯಪದಗಳು (Keywords):** ಅಸ್ಪೃಶ್ಯತೆ, ನಿಮ್ನ ವರ್ಗ, ದಲಿತರು, ದಲಿತ–ಬಂಡಾಯ ಸಾಹಿತ್ಯ, ಮುನಿವೆಂಕಟಪ್ಪ.

**ಪೀಠಿಕೆ**

ದಲಿತ–ಬಂಡಾಯ ಸಾಹಿತ್ಯವು ಸಾಮಾಜಿಕ ಸಮಾನತೆಗಾಗಿ ದನಿಗೂಡಿಸಿದ ಸಾಹಿತ್ಯ ಪ್ರಕಾರವಾಗಿದೆ. ಈ ಸಾಹಿತ್ಯ ಪ್ರಕಾರ ಉದಯವಾಗುವ ಕಾಲಘಟ್ಟದಲ್ಲಿ ದಲಿತ ಹೋರಾಟಗಳು, ಚಳವಳಿಗಳು ಹಾಗೂ ಪ್ರತಿಭಟನೆಗಳು ನಿರಂತರವಾಗಿ ನಡೆಯುತ್ತಿದ್ದವು. ಇಂತಹ ಸಂದರ್ಭದಲ್ಲಿ ತಮ್ಮ ಜನಾಂಗದ ಪರವಾಗಿ ಚಳವಳಿ ಹಾಗೂ ಸಾಹಿತ್ಯ ಎರಡು ರೀತಿಯಲ್ಲಿಯೂ ಹೋರಾಡುವ ಹಲವಾರು ಸಾಹಿತಿಗಳು ಹುಟ್ಟಿಕೊಂಡರು. ಅವರಲ್ಲಿ ದೇವರಾಯ ಇಂಗಳೆ, ಬಿ.ಶ್ಯಾಮಸುಂದರ, ಜಿ.ವೆಂಕಟಯ್ಯ, ಎಚ್.ನರಸಿಂಹಯ್ಯ, ಸೋಸಲೆ ಸಿದ್ದಪ್ಪ, ಇಂದೂದರ ಹೊನ್ನಾಪುರ, ಡಾ.ವಿ.ಮುನಿವೆಂಕಟಪ್ಪ, ಡಾ.ಸಿದ್ಧಲಿಂಗಯ್ಯ, ದೇವನೂರ ಮಹಾದೇವ, ಮುಳ್ಳೂರು ನಾಗರಾಜ, ಮನಜ, ಗಂಗರಾಮ ಚಂಡಾಳ, ಚನ್ನಣ್ಣ ವಾಲೀಕರ್, ಪ್ರೊ.ಎಚ್.ಟಿ.ಪೋತೆ, ಅರವಿಂದ ಮಾಲಗತ್ತಿ, ಎಲ್.ಹನುಮಂತಯ್ಯ ಮುಂತಾದವರನ್ನು ಸ್ಮರಿಸಬಹುದು.

**ವಿ.ಮುನಿವೆಂಕಟಪ್ಪನವರ ಬಾಲ್ಯ ಜೀವನ.**

ವಿ.ಮುನಿವೆಂಕಟಪ್ಪನವರು ಕೋಲಾರ ಜಿಲ್ಲೆಯ ಗಡಿ ಪ್ರದೇಶದಲ್ಲಿ ಬರುವ ಯಡಹಳ್ಳಿ ಎಂಬ ಪುಟ್ಟ ಗ್ರಾಮದಲ್ಲಿ ಜನ್ಮತಾಳಿದರು. ಈ ಗ್ರಾಮದ ಬಹುತೇಕ ಎಲ್ಲರೂ ಕೂಡ ಅನಕ್ಷರಸ್ಥರಾಗಿದ್ದು, ಯಾವುದೇ ಶಾಲೆ ಅಥವ ಅಂಗನವಾಡಿ ಇರಲಿಲ್ಲ. ತಂದೆ ವೆಂಕಟಪ್ಪ ತಾಯಿ ವೆಂಕಟಗಿರಿಯಮ್ಮ ಇವರ ನಾಲ್ಕು ಮಕ್ಕಳಲ್ಲಿ ವಿ.ಮುನಿವೆಂಕಟಪ್ಪನವರು ಮೊದಲನೆಯ ಮಗನಾಗಿ ಏಪ್ರಿಲ್ 1, 1949ರಲ್ಲಿ ಜನಸಿದರು.

*Please cite this article as:* ಪ್ರಕಾಶ ಹಣಮಂತ ಸಂಗಮ. (2023). ಡಾ. ವಿ. ಮುನಿವೆಂಕಟಪ್ಪನವರ ಜೀವನ ಸಾಧನೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(3). ಪು.ಸಂ.* 113–116.

ವಿ.ಮುನಿವೆಂಕಟಪ್ಪನವರು ಬಾಲ್ಯದಲ್ಲಿಯೇ ಹಲವಾರು ನೋವು ಮತ್ತು ಅವಮಾನಗಳನ್ನು ಕಂಡುಂಡವರು ಆದರೂ ಧೈರ್ಯಗೆಡದೆ ಸಮಾಜದಲ್ಲಿ ದೊಡ್ಡ ವ್ಯಕ್ತಿಯಾಗಿ ಗುರುತಿಸಿಕೊಂಡರು. ಇವರು ಡಾ. ಬಾಬಾ ಸಾಹೇಬ ಅಂಬೇಡ್ಕರ್ ಅವರ ವಿಚಾರಧಾರೆ ಮತ್ತು ಅವರ ತತ್ವ–ಸಿದ್ಧಾಂತಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಮಾಜದಲ್ಲಿನ ಅಸಮಾನತೆಯನ್ನು ತೊಲಗಿಸಲು ಚಿಕ್ಕ ವಯಸ್ಸಿನಲ್ಲಿಯೇ ಹೋರಾಟದಲ್ಲಿ ದುಮುಕಿದರು.

1968 ರಲ್ಲಿ ಕಾಲೇಜು ದಿನಗಳಲ್ಲಿ ಬೆಂಗಳೂರಿನಲ್ಲಿ ಡಿ.ಎಂ.ತಿಮ್ಮರಾಯಪ್ಪನವರ ಪರಿಚಯವಾಯಿತು. ಅವರು ದಲಿತ ಕ್ರಿಯಾಸಮಿತಿ ಸ್ಥಾಪಿಸಿ ಚಳವಳಿ ಹಾಗೂ ಹೋರಾಟಗಳಲ್ಲಿ ಭಾಗವಹಿಸಿದರು. ಬೆಂಗಳೂರಿನ ವಿಧಾನಸೌಧದ ಮುಂದೆ ಬಾಬಾ ಸಾಹೇಬರ ಪ್ರತಿಮೆ ನಿರ್ಮಾಣ ಹಾಗೂ ವಿಧಾನಸೌಧದ ಮುಂದಿನ ರಸ್ತೆಗೆ ಡಾ. ಅಂಬೇಡ್ಕರ ರಸ್ತೆ ಎಂದು ನಾಮಕರಣ ಮಾಡಲು ಸರಕಾರದ ಮೇಲೆ ಒತ್ತಡ ಹಾಕಿದಂತಹ ದಲಿತ ಹೋರಾಟಗಳಲ್ಲಿ ವಿ.ಮುನಿವೆಂಕಟಪ್ಪ ಪ್ರಮುಖರು. ಕರ್ನಾಟಕದಲ್ಲಿ ದಲಿತ ಸಂಘರ್ಷ ಸಮಿತಿಯು ಅಸ್ಪೃಶ್ಯರ ವಿರುದ್ಧ ದೊಡ್ಡ ಹೋರಾಟವನ್ನು ಕರ್ನಾಟಕದ ತುಂಬಾ ಹಬ್ಬಿಕೊಂಡಿತು. ಅದಲ್ಲಿ ವಿ.ಮುನಿವೆಂಕಟಪ್ಪನವರು ಸಕ್ರಿಯವಾಗಿ ಭಾಗವಹಿಸಿದರು. ಚಂದ್ರಗುತ್ತಿಯಲ್ಲಿ ಜಾರಿಯಲ್ಲಿದ್ದ ಬೆತ್ತಲೆ ಸೇವೆ ವಿರುದ್ಧ ಹೋರಾಟ ರೂಪಿಸಿ ಅಮಾಯಕ ಜನರಿಗೆ ನ್ಯಾಯ ಒದಗಿಸಿಕೊಡುವ ಕೆಲಸ ಮಾಡಿದರು. ಕರ್ನಾಟಕ ರಾಜ್ಯದ ದಲಿತ ಸಂಘರ್ಷ ಸಮಿತಿ ಮತ್ತು ದಲಿತ ಚಳುವಳಿಯು ಶೋಷಿತ ಜನಾಂಗವನ್ನು ಎಚ್ಚರಿಸಿ ತಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುವಂತೆ ಮಾಡಿದರು. ನಮ್ಮನ್ನಾಳುವ ಸರಕಾರಗಳು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ತಾಲೂಕು ಹಾಗೂ ಹೋಬಳಿ ಮತ್ತು ಗ್ರಾಮ ಮಟ್ಟದಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ಭವನ ಹಾಗೂ ಪ್ರತಿಮೆ ನಿರ್ಮಿಸಲು ಸರಕಾದ ಮೇಲೆ ಒತ್ತಡ ಹೇರಿದರು.

ಹೀಗೆ ವಿ.ಮುನಿವೆಂಕಟಪ್ಪನವರು ಹುಟ್ಟು ಹೋರಾಟಗಾರರು ಚಿಕ್ಕ ವಯಸ್ಸಿನಿಂದ ಬಾಬಾ ಸಾಹೇಬರು ಹಾಕಿ ಕೊಟ್ಟ ಮಾರ್ಗ ಶಿಕ್ಷಣ, ಸಂಘಟನೆ, ಹೋರಾಟವನ್ನು ತನ್ನ ಬದುಕಿನ ಉದ್ದಕೂ ಅಳವಡಿಸಿಕೊಂಡು ಆಚಾರ ವಿಚಾರದಲ್ಲಿ ಅವರ ತತ್ವ ಸಿದ್ಧಾಂತಗಳನ್ನು ಪ್ರಚಾರ ಮಾಡುತ್ತ ಜನ ಸಾಮಾನ್ಯರಿಗೆ ನ್ಯಾಯ ಒದಗಿಸಿ ಕೊಡುವ ಕೆಲಸ ಮಾಡಿದರು.

**ವೃತ್ತಿ ಜೀವನ**

ಡಾ. ವಿ.ಮುನಿವೆಂಕಟಪ್ಪನವರು 1972ರಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಉಲ್ಲಾಳದಲ್ಲಿನ ಗೇರುಬೀಜ ಸಂಶೋಧನಾ ಕೇಂದ್ರದಲ್ಲಿ ಸಹಾಯಕರಾಗಿ ತಮ್ಮ ವೃತ್ತಿ ಜೀವನ ಪ್ರಾರಂಭಿಸಿ ನಂತರದಲ್ಲಿ ಸಿದ್ಧಾಪುರ, ತಾಲೂಕಿನಲ್ಲಿ ಸೇವೆ ಸಲ್ಲಿಸಿದರು. 1975ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ಸಹಾಯಕ ಕೃಷಿ ಅಧಿಕಾರಿಯಾಗಿ ನೇಮಕಗೊಂಡು ಬಿಜಾಪೂರ, ಗೌರಿಬಿದನೂರು, ಸಿದ್ಧಾಪುರ, ಮಳವಳ್ಳಿ, ಕೆ. ಆರ್. ನಗರ, ಮೈಸೂರು ಮುಂತಾದೆಡೆ ಕಾರ್ಯ ನಿರ್ವಹಿಸಿದರು. 1992 ರಲ್ಲಿ ಇವರ ಜೀವನ ಸಾಧನೆಯನ್ನು ಗುರುತಿಸಿ ಸರಕಾರವು ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಸಿದ್ಧಾಪುರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿಯೇ ಉತ್ತರಕನ್ನಡ ಜಿಲ್ಲಾ ಬಂಡಾಯ ಸಾಹಿತ್ಯ ಸಮ್ಮೇಳನವನ್ನು ಏರ್ಪಡಿಸಿತ್ತು. ಆ ಸಮ್ಮೇಳನದಲ್ಲಿ ತಮ್ಮ ಚೊಚ್ಚಲ ಕವನ ಸಂಕಲನ **"ಕೆಂಡದ ನಡುವೆ"** ಕೆಲವು ಸಾಲುಗಳು ವಾಚಿಸಿದರು. ಆ ಕವನ ಸಂಕಲನ ಕರ್ನಾಟಕದ ಸಾಮಾಜಿಕ ರಾಜಕೀಯ ವಲಯದಲ್ಲಿ ಅಲ್ಲೋಲ–

ಕಲ್ಲೋಲವನ್ನುಂಟು ಮಾಡಿತು. ವಾದ ವಿವಾದಗಳಿಗೆ ಆಸ್ಪದವಾಗಿ ಅಧಿಕಾರ ಸ್ಥಾನದಲ್ಲಿದವರ ಕಣ್ಣು ಕೆಂಪಾಯಿತು. ಹೀಗಾಗಿ ಡಾ.ವಿ.ಮುನಿವೆಂಕಟಪ್ಪನವರು ಸೇವೆಯಿಂದ ಅಮಾನತು ಮಾಡಲಾಯಿತು.

**ಡಾ.ವಿ.ಮುನಿವೆಂಕಟಪ್ಪನವರ ಸಾಹಿತ್ಯ**

ಡಾ.ವಿ.ಮುನಿವೆಂಕಟಪ್ಪನವರು ಕಾವ್ಯ ಕ್ಷೇತ್ರದಲ್ಲಿ ಮಾತ್ರವಲ್ಲದೆ. ಸಾಹಿತ್ಯದ ಇತರ ಪ್ರಕಾರಗಳಲ್ಲೂ ಕೃಷಿ ಮಾಡಿರುವುದು ಕಂಡು ಬರುತ್ತದೆ. ಇವರ ಬರಹಗಳು ಅನುಭವದ ಹಿನ್ನಲೆಯಲ್ಲಿ ರೂಪುಗೊಂಡಿವೆ. ಬದುಕಿನುದ್ದಕ್ಕೂ ತಾವು ಅನುಭವಿಸಿದ ನೋವು ನಲಿವು ಹತಾಶೆಯ ಮನೋಭಾವವನ್ನು ತಮ್ಮ ಬರಹಗಳಲ್ಲಿ ಸಾಹಿತ್ಯದ ಮುಖಾಂತರ ಹೊರತಂದಿದ್ದಾರೆ. ವಿ.ಮುನಿವೆಂಕಟಪ್ಪನವರು ಕೆಂಡದ ನಡುವೆ, ಸ್ವಾಭಿಮಾನದ ಬೀಡಿಗೆ, ಕಾಡು ಕಣಿವೆಯ ಹಕ್ಕಿ, ಶಿಶು ಸಾಹಿತ್ಯ, ಮಹಾಚೇತನ ಅಂಬೇಡ್ಕರ್, ಐಕ್ಯಗೀತೆ (ಭಾವಗೀತೆ), ಬಾಲಕ ಅಂಬೇಡ್ಕರ್ ಮುಂತಾದ ಕಾವ್ಯಕೃತಿಗಳ ಜೊತೆಗೆ ಅಂತ್ಯಜನ ಅಂತರಂಗ ಎಂಬ ಆತ್ಮಕತೆಯನ್ನು ಕೂಡ ರಚಿಸಿದ್ದಾರೆ. ಇದಲ್ಲದೆ ದಲಿತ ಚಳಿವಳಿ ಒಂದು ಅವಲೋಕನ, ದಲಿತ ಸಾಹಿತ್ಯ ದರ್ಶನ, ದಲಿತ ಚಳವಳಿ ಮತ್ತು ಸಾಹಿತ್ಯ, ದಲಿತ ಚಳವಳಿ ಚರಿತ್ರೆ, ಸಾಮಾಜಿಕ ಚಳವಳಿ, ಸಾಮಾಜಿಕ ದಾರ್ಶನಿಕರು, ಅಂಬೇಡ್ಕರ್ ಭಾರತೀಯ ಬೆಳಕು ಮುಂತಾದ ಸಂಪಾದಿತ ಕೃತಿಗಳನ್ನು ಹೊರತಂದಿದ್ದಾರೆ.

**ವಿ.ಮುನಿವೆಂಕಟಪ್ಪನವರ ಮೇಲೆ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರಭಾವ**

ವಿ.ಮುನಿವೆಂಕಟಪ್ಪನವರು ಮಹಾಮಾನವತವಾದಿ ಬುದ್ಧ, ಬಸವ, ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳ ಆದರ್ಶಗಳನ್ನು ಅಳವಡಿಸಿಕೊಂಡವರು. ವಿ.ಮುನಿವೆಂಕಟಪ್ಪನವರು ಡಾ.ಬಿ.ಆರ್.ಅಂಬೇಡ್ಕರ್ ಅವರ ಬದುಕು ಬರಹಗಳಿಂದ ಪ್ರೇರಿತರಾಗಿ ಅವರು ನೀಡಿದ ಸೌಲಭ್ಯಗಳನ್ನು ಪಡೆದ ಫಲಾನುಭವಿಗಳು ಈ ನಿಟ್ಟಿನಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಹಾಗೂ ಅವರು ಬರೆದಿರುವ ಭಾರತದ ಸಂವಿಧಾನವನ್ನು ಮಹಾಭಾರತಕ್ಕಿಂತಲೂ ಮಿಗಿಲು ಎಂದು ಹೇಳುತ್ತಾರೆ.

**ವಿ.ಮುನಿವೆಂಕಟಪ್ಪನವರ ವ್ಯಕ್ತಿತ್ವ.**

ವಿ.ಮುನಿವೆಂಕಟಪ್ಪನವರ ವ್ಯಕ್ತಿತ್ವ ಅತ್ಯಂತ ಸಂಕೀರ್ಣವಾಗಿದುದಾಗಿದೆ. ಮಾನವೀಯ ಮೌಲ್ಯ ಮತ್ತು ಅಪಾರ ಪರಿಶ್ರಮ ಅವರ ವ್ಯಕ್ತಿತ್ವದ ಅವಿಭಾಜ್ಯ ಅಂಗಗಳಾಗಿದ್ದವು. ಸಮಾಜದಲ್ಲಿ ಜಾತೀಯತೆ, ಅಸಮಾನತೆ, ಶೋಷಣೆಯ ಬಗೆಗಳು ಬಡತನದಿಂದ ತುಂಬಿ ತುಳುಕುತ್ತಿದ್ದ ಗ್ರಾಮೀಣ ಪರಿಸರದಿಂದ ಹುಟ್ಟಿಬೆಳೆದ ಇವರು ಸಹಜವಾಗಿಯೇ ಸಮಾಜದವಾದದ ನಿಲುವುಗಳಿಂದ ಪ್ರಭಾವಿತರಾಗಿದ್ದಾರೆ. ಹೋರಾಟವನ್ನು ತಮ್ಮ ಪ್ರವೃತ್ತಿಯನ್ನಾಗಿ ಬೆಳಸಿಕೊಂಡು ಶೋಷಿತ ವರ್ಗದ ಧ್ವನಿಯಾಗಿ ನಿಂತಿದ್ದಾರೆ. ತಮ್ಮ ಬದುಕಿನ ಏಕತಾನತೆಯನ್ನು ಕುರಿತಂತೆ ನಿರಾಸೆ ನಿರ್ಲಿಪ್ತತೆ ವಿಷಾದದ ಅನ್ಯಾಯಗಳನ್ನು ಕುರಿತು ತಿರಸ್ಕಾರದ ಮನೋಭಾವ ಇವರನ್ನು ಹೋರಾಟಗಾರರನ್ನಾಗಿ ರೂಪಿಸಿತು. ಅಲ್ಲದೆ ತನ್ನ ಜನಾಂಗದ ಬಗೆಗೆ ಅಪಾರವಾದ ಪ್ರೇಮ, ಅಭಿಮಾನ, ಹಾಗೂ ಕಾಳಜಿಯನ್ನು ಒಳಗೊಂಡಿರುವ ಇವರು ಸಮಾಜದದಲ್ಲಿನ ಶ್ರೇಣೀಕೃತ ವ್ಯವಸ್ಥೆ ಮತ್ತು ಅವೈಜ್ಞಾನಿಕ ತಳಹದಿಯನ್ನು ಖಂಡಿಸುತ್ತಾ ಅವರ ಬಗ್ಗೆ ಅಸಮಾಧಾನ ಅಸಂತೃಪ್ತಿ, ಸಿಟ್ಟು ಆಕ್ರೋಶದ ಸ್ವಭಾವಗುಣದ ವ್ಯಕ್ತಿಯಾಗಿದ್ದರು. ವಿ.ಮುನಿವೆಂಕಟಪ್ಪನವರು ಜೀವನದುದ್ದಕ್ಕೂ ಕಟ್ಟನಷ್ಟಗಳು ದುಖಃ ದುಮ್ಮಾನಗಳೊಡನೆಯೇ ಹಲವಾರು ರೀತಿಯ ಏಳುಬೀಳುಗಳನ್ನು ಅನುಭವಿಸಿ ಬಂದವರು.

ಒಟ್ಟಾರೆಯಾಗಿ ಡಾ.ವಿ.ಮುನಿವೆಂಕಟಪ್ಪನವರ ಬಾಲ್ಯ ಜೀವನ, ಹೋರಾಟದ ಬದುಕು, ಸಾಹಿತ್ಯವನ್ನು ಅವಲೋಕಿಸಿದಾಗ ಅಪ್ಪಟ ಅಂಬೇಡ್ಕರ್‌ವಾದಿಯಾದ ಇವರು ಬಸವಣ್ಣ, ಬುದ್ಧ ಮುಂತಾದವರಿಂದ ಪ್ರೇರಣೆ ಪಡೆದು ಸಮುದಾಯದ ಹಿತಕ್ಕಾಗಿ ದುಡಿದಿರುವುದು ಗೋಚರಿಸುತ್ತದೆ. ಅಲ್ಲದೆ ವಿ.ಮುನಿವೆಂಕಟಪ್ಪನವರ ಬದಕು ಮುಂದಿನ ಪೀಳಿಗೆಗೆ ಪ್ರೇರಣೆಯಾಗುವಂತಹ ಕೃತಿಗಳನ್ನು ರಚಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಅರ್ಜುನ ಗೊಳಸಂಗಿ. (ಸಂ.). *ದಲಿತ ಸಾಹಿತ್ಯ ಸಮಾಲೋಕನ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಕುಪ್ಪಳ್ಳಿ ಎಂ. ಭೈರಪ್ಪ. *ಮುನಿದರ್ಪಣ.*
- ಮಾನಸ. (ಸಂ.) ಬಹುಜನ ಚೇತನ. ವಿಚಾರವಾದಿ ಪ್ರಕಾಶನ.
- ಮುನಿವೆಂಕಟಪ್ಪ ವಿ. *ದಲಿತ ಚಳವಳಿ ಮತ್ತು ಸಾಹಿತ್ಯ.* ಎಸ್.ಎಸ್. ಪ್ರಕಾಶನ, ಮೈಸೂರು.
- ಮುನಿವೆಂಕಟಪ್ಪ ವಿ. (2019). *ಬಹುಜನ ಚಳವಳಿ.* ಕೀರ್ತಿ ಪ್ರಕಾಶನ.
- ನಾಗರಾಜು (ಸಂ). *ಬಹುಜನ ಪ್ರಜ್ಞೆ,* ತಳಗವಾದಿ ಪ್ರಕಾಶನ.
- ಪ್ರಕಾಶ ಸಂಗಮ. *ದಲಿತ ಚಳುವಳಿ ಹಾಗೂ ವಿ ಮುನಿವೆಂಕಟಪ್ಪನವರ ಸಾಹಿತ್ಯಿಕ ಅಧ್ಯಯನ.* ಅಪ್ರಕಟಿತ ಪ್ರೌಢ ಪ್ರಬಂಧ. ಗುಲ್ಬರ್ಗಾ ವಿಶ್ವವಿದ್ಯಾಲಯ.
- ಸವಿತ ಎಸ್. (ಸಂ.) (2012). *ಡಾ. ವಿ. ಮುನಿವೆಂಕಟಪ್ಪನವರ ಸಾಹಿತ್ಯ ಮಂಥನ.*